153 ಸೇ6 ನಿ-330 = (15)
LIRR
300625

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 330ರ ಮೇರೆಗೆ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ**

ವಿಷಯ:

2021–22ನೇ ಸಾಲಿನ ಬಿಬಿಎಂಪಿ ಕಾಮಗಾರಿಗಳಲ್ಲಿ ನಡೆದಿರುವ ಅಕ್ರಮಗಳು ಹಲವಾರು ಒಂದೇ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರಿಗೆ ಬಿಲ್ ಪಾವತಿ, ರಸ್ತೆ ಬದಿ ಚರಂಡಿಯ ಹೂಳು ತೆರವಿನಲ್ಲೂ ಗೋಲ್‌ಮಾಲ್, ಟೆಂಡರ್ ಮೊತ್ತಕ್ಕಿಂತ ಹೆಚ್ಚು ಹಣ ಪಾವತಿಸಿ ದೋಖಾ, ಹಳೇ ಕಲ್ಲು ಹೊಸ ಬಿಲ್ ಮಾಡುವುದು ಇಂತಹ ಹಗರಣಗಳಿಂದ ಕಾಮಗಾರಿ ವಿಭಾಗವೊಂದರಲ್ಲೇ 187.61 ಕೋಟಿ ರೂ. ಹಗರಣ ನಡೆದಿರುವುದು ಲೆಕ್ಕ ಪರಿಶೋಧನಾ ವರದಿಯಿಂದ ಬಯಲಿಗೆ ಬಂದಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಮರ್ಪಕ ದಾಖಲೆಗಳನ್ನು ಒದಗಿಸದ ಹಿನ್ನೆಲೆಯಲ್ಲಿ 906.84 ಕೋಟಿ ರೂ. ಮೊತ್ತಕ್ಕೆ ಆಕ್ಷೇಪಣೆ ಇದಲ್ಲದೇ ಸರಕು ಮತ್ತು ಸೇವಾ ಕಾಯಿದೆ ಅನ್ವಯ ಗುತ್ತಿಗೆದಾರರ ಬಿಲ್‌ಗಳಿಂದ ಜಿ.ಎಸ್.ಟಿ. ಟಿ.ಡಿ.ಎಸ್. ಕಡಿತ ಮಾಡಿ ಸರ್ಕಾರಕ್ಕೆ ಪಾವತಿಸಬೇಕಿದೆ ಆದರೆ ಗುತ್ತಿಗೆದಾರರ ಬಿಲ್‌ಗಳಲ್ಲಿ ಕಡಿತ ಮಾಡಿ ಸಂಗ್ರಹಿಸಿ ಹೀಗೆ ಹತ್ತು ಹಲವಾರು ಅಕ್ರಮಗಳು ಬಿ.ಬಿ.ಎಂ.ಪಿಯಲ್ಲಿ ನಡೆದಿರುವುದರಿಂದ ಸಾರ್ವಜನಿಕವಾಗಿ ಇದೊಂದು ಗಂಭೀರ ವಿಷಯವಾಗಿರುವ ಕುರಿತು.

ಉತ್ತರ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021–22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಮುಖ್ಯ ಲೆಕ್ಕಪರಿಶೋಧಕರ ಕಛೇರಿಯ ಪತ್ರ ಸಂಖ್ಯೆ: ಮುಲೆಪ/ವಾಲೆಪ/169/2024–25, ದಿನಾಂಕ: 14–05–2024 ರೊಂದಿಗೆ ಪಾಲಿಕೆಯ ವಿಶೇಷ ಆಯುಕ್ತರು (ಹಣಕಾಸು) ರವರ ಕಛೇರಿಗೆ ದಿನಾಂಕ: 20–05–2024 ರಂದು ಸಲ್ಲಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಆಕ್ಟ್ 1976ರ ಶೆಡ್ಯೂಲ್ IXರ ಭಾಗ–II ಕ್ರಮ ಸಂಖ್ಯೆ 13(2) ರಲ್ಲಿ ಮುಖ್ಯ ಲೆಕ್ಕಪರಿಶೋಧಕರಿಂದ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಸ್ವೀಕೃತವಾದ 6 ತಿಂಗಳೊಳಗೆ ಇಲಾಖೆಯ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ ಮುಖ್ಯ ಆಯುಕ್ತರ ಮೂಲಕ ಪಾಲಿಕೆಯ ಲೆಕ್ಕಪತ್ರ ಸ್ಥಾಯಿ ಸಮಿತಿ ಅನುಮೋದನೆಯೊಂದಿಗೆ ಕೌನ್ಸಿಲ್ ಸಭೆಗೆ ಮಂಡಿಸಿ ಅನುಮೋದನೆ ಪಡೆದು (ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ) ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಮೂಲಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ತೀರುವಳಿಗಾಗಿ ಸಲ್ಲಿಸಬೇಕಾಗಿರುತ್ತದೆ.

ಬಿ.ಬಿ.ಎಂ.ಪಿ, ಕಾಮಗಾರಿ ವಿಭಾಗದಲ್ಲಿ ಒಟ್ಟು 161 ಘಟಕ ಕಛೇರಿಗಳಿದ್ದು, ಈ ಕಛೇರಿಗಳ 457 ವಸೂಲಾತಿ ಕಂಡಿಕೆಗಳ ಮೊತ್ತ ರೂ.187.61 ಕೋಟಿ ಹಾಗೂ 381 ಆಕ್ಷೇಪಣಾ ಕಂಡಿಕೆಗಳ ಮೊತ್ತ ರೂ.906.84 ಕೋಟಿಗಳಿಗೆ ಸಂಬಂಧಿಸಿದಂತೆ ಆಯಾ ಘಟಕ ಕಛೇರಿಗಳಿಂದ ಅನುಪಾಲನಾ ವರದಿಯನ್ನು ಪಡೆದು ಅವುಗಳ ತೀರುವಳಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ನಅಇ 276 ಎಂಎನ್‌ವೈ 2025 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ